Publication : Vijaya Karnataka
Date: February 13, 2015
Page No: 1
Edition: State

SARA Media Net
Simply communicate...

# ಬಾಲಿವುಡ್ ನಟರ ಕನ್ನಡ ಪ್ರೇಮ

ಎಚ್. ಮಹೇಶ್
mahesha.haniyur@timesgroup.com

**ಕನ್ನಡ ನಟಿಯರು ತಮ್ಮ ಪಾತ್ರಕ್ಕೆ ಡಬ್ ಮಾಡಲು ಹಿಂದೇಟು ಹಾಕುತ್ತಾರೆ. ಆದರೆ ಪರಭಾಷಾ ನಟರು ಕನ್ನಡ ಚಿತ್ರಗಳಲ್ಲಿ ನಟಿಸಿ ಕನ್ನಡದಲ್ಲೇ ಧ್ವನಿ ಕೊಟ್ಟಿದ್ದಾರೆ. ಈ ಪಟ್ಟಿಗೆ ಲೇಟೆಸ್ಟ್ ಸೇರ್ಪಡೆ ಬಾಲಿವುಡ್‌ನ ರಾಹುಲ್ ಬೋಸ್.**

ಬಾಲಿವುಡ್ ನಟರಿಗೆ ಕನ್ನಡ ಮಾತನಾಡುವುದಕ್ಕೆ ಬರುತ್ತದೆಯೆ? ಜನರ ಜತೆ ಕನ್ನಡ ಮಾತನಾಡುವುದಕ್ಕೆ ಅವರು ಹಿಂಜರಿಯಬಹುದು. ಆದರೆ ತಮ್ಮ ಪಾತ್ರಕ್ಕೆ ಧ್ವನಿ ಕೊಡುವಾಗ ಮಾತ್ರ ಕನ್ನಡ ಮಾತನಾಡುವುದಕ್ಕೆ ಹಿಂಜರಿಯುವುದಿಲ್ಲ. ಅದಕ್ಕೆ ಇತ್ತೀಚಿನ ಉದಾಹರಣೆ ಬಾಲಿವುಡ್ ನಟ ರಾಹುಲ್ ಬೋಸ್. ಇವರು 'ನಿರುತ್ತರ' ಸಿನಿಮಾದಲ್ಲಿ ತಮ್ಮ ಪಾತ್ರಕ್ಕೆ ಕನ್ನಡದಲ್ಲೇ ಡಬ್ ಮಾಡಿದ್ದಾರೆ. ಈ ಚಿತ್ರವನ್ನು ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶನ ಮಾಡಿದ್ದಾರೆ.

ಬಾಲಿವುಡ್ ನಟರು ಇದೇ ಮೊದಲ ಬಾರಿಗೆ ತಮ್ಮ ಪಾತ್ರಗಳಿಗೆ ಧ್ವನಿ ಕೊಟ್ಟಿದ್ದಾರೆ ಎಂದರೆ ಅದು ತಪ್ಪಾದೀತು. ಈ ಹಿಂದೆ ಗಿರೀಶ್ ಕಾರ್ನಾಡ್ ನಿರ್ದೇಶನದ 'ಕಾಡು' ಸಿನಿಮಾದಲ್ಲಿ ಬಾಲಿವುಡ್ ಖ್ಯಾತ ಖಳ ನಟ ಅಂಬರೀಶ್ ಪುರಿ ತಮ್ಮ ಪಾತ್ರಕ್ಕೆ ಕನ್ನಡದಲ್ಲಿ ಧ್ವನಿ ಕೊಟ್ಟಿದ್ದರು. ಈ ಚಿತ್ರ ಮೂರು ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿತ್ತು ಕೂಡ. ಇನ್ನು ಓಂ ಪ್ರಕಾಶ್ ರಾವ್ ನಿರ್ದೇಶನದ 'ಎಕೆ 47' ಚಿತ್ರದಲ್ಲಿ ಬಾಲಿವುಡ್ ಖ್ಯಾತ ನಟ ಓಂ ಪುರಿ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅವರು ಕೂಡ ತಮ್ಮ ಪಾತ್ರಕ್ಕೆ ಕನ್ನಡದಲ್ಲೇ ಡಬ್ ಮಾಡಿದ್ದರು. ಓಂ ಪುರಿ ಕನ್ನಡ ಮಾತನಾಡುವುದನ್ನು ಕೇಳಿ ಆ ಚಿತ್ರದ ನಾಯಕ ಶಿವರಾಜ್‌ಕುಮಾರ್ ಬೆರಗಾಗಿದ್ದರು ಎಂದು ನಿರ್ದೇಶಕ ಓಂ ಪ್ರಕಾಶ್ ಆ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಲೂಸ್ ಮಾದ ಯೋಗೀಶ್ ಅಭಿನಯದ 'ಯಕ್ಷ' ಚಿತ್ರದಲ್ಲಿ ಬಾಲಿವುಡ್‌ನ ನಾನಾ ಪಾಟೇಕರ್ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ನಟಿಸಿದ್ದರು. ಆ ಚಿತ್ರಕ್ಕೆ ಅವರೇ ಧ್ವನಿ ಕೊಟ್ಟಿದ್ದರು. ನಾನಾ ಪಾಟೇಕರ್ ಬೆಂಗಳೂರಿನ ಮಾಧ್ಯಮಗಳ ಜತೆ ಮಾತನಾಡುವಾಗಲೂ ಕನ್ನಡದಲ್ಲೇ ಮಾತನಾಡಿದ್ದು ವಿಶೇಷವಾಗಿತ್ತು.


ರಾಹುಲ್ ಬೋಸ್, ಅಪೂರ್ವ ಕಾಸರವಳ್ಳಿ


ನಾನಾ ಪಾಟೇಕರ್, ರಮೇಶ್ (ನಿರ್ದೇಶಕ)

**ರಾಹುಲ್ ಬೋಸ್ ಅನುಭವ:**

ರಾಹುಲ್ ಬೋಸ್ ಕನ್ನಡ ಮಾತ್ರವಲ್ಲದೇ ತಮಿಳಿನ ಕಮಲ್ ಹಾಸನ್ ನಾಯಕನಾಗಿ ನಟಿಸಿರುವ 'ದಶಾವತಾರಂ' ಚಿತ್ರದಲ್ಲಿ ಖಳ ನಾಯಕನಾಗಿ ನಟಿಸಿದ್ದಾರೆ. ಅಲ್ಲೂ ಕೂಡ ಅವರು ಆ ಪಾತ್ರಕ್ಕೆ ತಮಿಳಿನಲ್ಲೇ ಡಬ್ ಮಾಡಿದ್ದರು. ಮೂಲತಃ ಬಂಗಾಲಿಯವರಾಗಿ ಬೇರೆ ಭಾಷೆಯಲ್ಲಿ ಮಾತನಾಡಲು ಕಷ್ಟವಾಗಲಿಲ್ಲವೆ? ಎಂದು ಅವರನ್ನು ಕೇಳಿದಾಗ ಅವರು ಹೇಳಿದ್ದು ಇಷ್ಟು; 'ಕನ್ನಡ ಹಾಗೂ ತಮಿಳು ಚಿತ್ರಗಳಿಗೆ ನಾನು ಧ್ವನಿ ಕೊಟ್ಟಿದ್ದೇನೆ. ಆದರೆ ಕನ್ನಡ ನನಗೆ ಕಷ್ಟ ಅನಿಸಲಿಲ್ಲ, ನಿರ್ದೇಶಕ ಅಪೂರ್ವ ನನಗೆ ಡಬ್ ಮಾಡಲು ಸಹಾಯ ಮಾಡಿದರು. ನಾನು ಮಾತನಾಡುವ ಪ್ರತಿ ಕನ್ನಡ ಪದವನ್ನು ಹೇಗೆ ಉಚ್ಚಾರಣೆ ಮಾಡಬೇಕು ಎಂಬುದನ್ನು ರೆಕಾರ್ಡ್ ಮಾಡಿಕೊಂಡು ಕೇಳಿ ಅದನ್ನು ಅಭ್ಯಾಸ ಮಾಡಿಕೊಂಡ ನಂತರ ಡಬ್ ಮಾಡುತ್ತಿದ್ದೆ. ನಮ್ಮ ಪಾತ್ರಕ್ಕೆ ಹಾಗೂ ನಟನೆಗೆ ಧ್ವನಿ ಕೊಡಲಿಲ್ಲ ಎಂದರೆ ನಟನಾಗಿ ಪರಿಪೂರ್ಣತೆ ಹೊಂದುವುದಿಲ್ಲ ಎಂಬ ಅಭಿಪ್ರಾಯ ನನ್ನದು. ಅದಕ್ಕಾಗಿಯೇ ನಾನು ಕನ್ನಡ ನನಗೆ ಗೊತ್ತಿಲ್ಲದೇ ಇದ್ದರೂ ಸಾಕಷ್ಟು ಶ್ರಮ ವಹಿಸಿ ಡಬ್ ಮಾಡಿದ್ದೇನೆ'.

ನಟ ಕಮಲ್ ಹಾಸನ್ ಕೂಡ 'ರಾಮ ಶಾಮ ಭಾಮ' ಚಿತ್ರಕ್ಕೆ ಅವರೇ ಧ್ವನಿ ಕೊಟ್ಟಿದ್ದರು. ಅದರಲ್ಲಿಯೂ ಅವರು ಉತ್ತರ ಕರ್ನಾಟಕದ ಭಾಷೆಯನ್ನು ಕಲಿತು ಆ ಪಾತ್ರಕ್ಕೆ ಡಬ್ ಮಾಡಿದ್ದು ಅವರ ನಿರ್ದೇಶಕ ರಮೇಶ್ ಅರವಿಂದ್‌ಗೆ ಖುಷಿ ಕೊಟ್ಟಿತ್ತು. ■

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**